



# 'ಕುದಿಯುವುದರೊಳಗಾಗಿ..'

**ಕ**ಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ 'ಕುಲವಧು' ಧಾರಾವಾಹಿಯಲ್ಲಿ ವಚನಾಳ ಅಜ್ಜಿ ಕಮಲಮ್ಮ ಧನ್ಯಳ ಮಗುವನ್ನು ಬದಲಾಯಿಸಿ, 'ಈ ಮಗು ಧನ್ಯಳದ್ದಲ್ಲ, ವಚನಾಳದ್ದು. ಧನ್ಯಳ ಮಗು ಹುಟ್ಟುವಾಗಲೇ ಸತ್ತು ಹೋಗಿತ್ತು' ಎಂದು ಸಾಧಿಸುತ್ತಾಳೆ. ಈ ವಿಷಯ ರಾಥೋಡರ ತಂಗಿ ಲಕ್ಷ್ಮಿಗೆ ತಿಳಿದು, ಅಜ್ಜಿ ಮಾಡಿದ ಮೋಸವನ್ನು ಮನೆ ಮಂದಿಗೆಲ್ಲ ತಿಳಿಸುವುದಾಗಿ ಧನ್ಯಳಿಗೆ ಹೇಳುತ್ತಾಳೆ. ಅಂತೆಯೇ, ಮನೆ ಮಂದಿಯನ್ನೆಲ್ಲ ಸೇರಿಸುತ್ತಾಳೆ ಸಹ. ಇನ್ನೇನು! ಅಜ್ಜಿಯ ಮೋಸ ಬಯಲಾಗುತ್ತದೆ ಎಂದು ನಾವು ನಿರೀಕ್ಷಿಸುತ್ತಿರುವಾಗ, ಲಕ್ಷ್ಮಿ ಮನೆ ಮಂದಿಗೆ ಹಿತ ವಚನ ಬೋಧಿಸಲು ಆರಂಭಿಸುತ್ತಾಳೆ. ಮಗು ಧನ್ಯಳದ್ದು ಎಂಬ ಸತ್ಯ ಸಂಗತಿ ಮನೆಯವರ್‍ಯಾರಿಗೂ ಗೊತ್ತಾಗುವುದೇ ಇಲ್ಲ.

ಕಲರ್ಸ್ ಕನ್ನಡದ ಇನ್ನೊಂದು ಧಾರಾವಾಹಿ 'ರಾಧಾ ರಮಣ'ದಲ್ಲಿ ಸಿತಾರಾದೇವಿಯು ರುದ್ರನನ್ನು ಗೋಪ್ಯ ಸ್ಥಳದಲ್ಲಿ ಭೇಟಿಯಾಗಲು ಸೂಚಿಸುತ್ತಾಳೆ. ಇದಕ್ಕೂ ಮುಂಚೆಯೇ ರಮಣ್ ಮತ್ತು ಪೊಲೀಸ್ ಇನ್‌ಸ್ಪೆಕ್ಟರ್ ಹೂಡಿದ ಉಪಾಯದ ರೀತ್ಯಾ, ರುದ್ರನಿಗೆ ಗೊತ್ತಿಲ್ಲದಂತೆ ಪೊಲೀಸ್ ಕಾನ್‌ಸ್ಟೇಬಲ್ ಒಬ್ಬ ಅವನನ್ನು ಹಿಂಬಾಲಿಸುತ್ತಿರುತ್ತಾನೆ. ಸದ್ಯ! ಇನ್ನು ಸಿತಾರಾ ದೇವಿ ಸಿಕ್ಕಿ ಹಾಕಿಕೊಂಡಂತೆಯೇ! ಎಂದು ನಾವು ಊಹಿಸುತ್ತಿರುವಾಗ, ಪೊಲೀಸ್ ಕಾನ್‌ಸ್ಟೇಬಲ್ ರುದ್ರನನ್ನು ಹಿಂಬಾಲಿಸುತ್ತಿರುವ ವಿದ್ಯಮಾನವು ಸಿತಾರಾದೇವಿಗೆ ಅದು ಯಾವ ಮಾಯೆಯಲ್ಲಿಯೋ ಗೊತ್ತಾಗಿ, ಅವಳು ರುದ್ರನನ್ನು ವಾಪಸ್ ಹೋಗುವಂತೆ ಮಾಡುತ್ತಾಳೆ.

ಇನ್ನು ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ 'ಬ್ರಹ್ಮ ಗಂಟು' ಧಾರಾವಾಹಿಯ ಕಥಾನಾಯಕಿಯು ಅತ್ಯಂತ ಭೋಳೆ ಸ್ವಭಾವದವಳು. ಅವಳು ಏನಾದರೊಂದು ಎಡವಟ್ಟು ಮಾಡಿಕೊಂಡು, ಮನೆಯವರಿಂದ ಅಪಹಾಸ್ಯಕ್ಕೆ ಒಳಗಾಗುತ್ತಾಳೆ. ಪುನಃ ಮತ್ತೊಂದು ಕೆಲಸ, ಪುನಃ ಎಡವಟ್ಟು, ಪುನಃ ಅಪಹಾಸ್ಯ. ಇದೇ ರೀತಿಯಾಗಿ ಧಾರಾವಾಹಿಯು ಅಬಾಧಿತವಾಗಿ ಮುಂದುವರಿದಿದೆ.

ಸನ್ನಿವೇಶವನ್ನು ಉತ್ತುಂಗ ಮಟ್ಟಕ್ಕೆ (climaxಗೆ) ಕೊಂಡೊಯ್ದು, ಅಲ್ಲಿಂದ ಸರ್ರನೆ ಜಾರುತ್ತಾ, ಪುನಃ ಮೊದಲಿನ ಸ್ಥಿತಿಗೆ ತಲುಪಿ, ಅಲ್ಲಿಂದ ಮತ್ತೆ ಮುಂದುವರಿಯುವುದು ನಮ್ಮ ವಾಹಿನಿಗಳ ಜಾಯಮಾನ. ದುರ್ಜನರ ದುಷ್ಟ ಕಾರ್ಯತಂತ್ರಗಳು ಸಜ್ಜನರಿಗೆ ಯಾವುದೇ ಕಾರಣಕ್ಕೂ ಗೊತ್ತಾಗುವುದೇ ಇಲ್ಲ. 'ಕುದಿಯುವುದರೊಳಗಾಗಿ ಮೂರು ಸಲ ಹಳಸಿತಂತೆ!' ಎಂಬ ಕನ್ನಡದ ಗಾದೆ ಇಂತಹ ಸಂದರ್ಭದಲ್ಲಿ ಜ್ಞಾಪಕವಾಗುತ್ತದೆ.

– ಉಡುಪಿ ಅನಂತೇಶ ರಾವ್, ಬೆಂಗಳೂರು

ವಾರದ ಪತ್ರ

## ಸಾಧನೆ ಮಾತ್ರ ಪರಿಗಣಿಸಿ

ಸ್ಪರ್ಧಿಗಳು ಹಾಡುಗಾರಿಕೆಯಲ್ಲಿ, ಸಂಗೀತ ಜ್ಞಾನದಲ್ಲಿ ಹೊಂದಿರುವ ಪರಿಣಿತಿಯ ಆಧಾರದಲ್ಲಿ ಸ್ಪರ್ಧಾತ್ಮಕ ಕಾರ್ಯಕ್ರಮಕ್ಕೆ ಯುವ ಪ್ರತಿಭೆಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಮೊದಲ ಹಂತದಿಂದಲೇ ಆರಂಭವಾಗುತ್ತದೆ. ಪ್ರತಿ ಸುತ್ತಿನಲ್ಲಿಯೂ ತೀರ್ಪುಗಾರರ ತಂಡ ನೀಡುವ ಅಂಕಗಳು ಮಾತ್ರ ಮಹತ್ವ ಹೊಂದಿರುತ್ತವೆ. ಆದರೆ ಫೈನಲ್ಸ್ ಎಂಬ ನಿರ್ಣಾಯಕ ಘಟ್ಟದಲ್ಲಿ ತೀರ್ಪುಗಾರರ ಅಂಕಗಳೊಟ್ಟಿಗೆ ವೀಕ್ಷಕರ ಮತಗಳನ್ನು ಬೆರೆಸಿ ವಿಜೇತರನ್ನು ನಿರ್ಧರಿಸುವುದು ಸಾಧನೆ ಹಾಗೂ ತಾಂತ್ರಿಕ ಅರ್ಹತೆಯನ್ನು ಗುರುತಿಸುವ ವೈಖರಿಯಲ್ಲ.

ಇತ್ತೀಚೆಗೆ ಮುಕ್ತಾಯವಾದ ಝೀ ಕನ್ನಡದ ಸಾ.ರೆ.ಗ.ಮ.ಪ.. 14ನೇ ಆವೃತ್ತಿಯ ವಿಜೇತನನ್ನು ವೀಕ್ಷಕರ ಮತಗಳ ಆಧಾರದಡಿ ನಿರ್ಧರಿಸಿದ ಬಗೆಯಿಂದ ಇತರ ಯುವ ಪ್ರತಿಭೆಗಳಿಗೆ ನಿರಾಶೆಯಾಗಿದೆ. ಮುಂದಿನ ದಿನಗಳಲ್ಲಿ ವಿಜೇತರನ್ನು ಆಯ್ಕೆ ಮಾಡುವ ಪದ್ಧತಿಯಲ್ಲಿ ಪರಿಷ್ಕರಣೆಯಾಗಲಿ.

–ಸುಶೀಲಾ ಬಿ.ಆರ್. ರಾಮಣ್ಣ, ಬೆಂಗಳೂರು

## ವಿಳಾಸ ನೀಡಿ

ಚಂದನ ವಾಹಿನಿಯ 'ಶುಭೋದಯ' ಕಾರ್ಯಕ್ರಮವು ವ್ಯಕ್ತಿಚಿತ್ರವನ್ನು ಅನಾವರಣಗೊಳಿಸುತ್ತಲೇ ಸಾಧನೆಯ ಪರಿಚಯ ಮಾಡುತ್ತಿದೆ. ಕೊನೆಯಲ್ಲಿ ಅವರ ವಿಳಾಸವನ್ನು ನೀಡಿದರೆ ಆಯಾ ಕ್ಷೇತ್ರದಲ್ಲಿ ಬೆಳೆಯುವವರಿಗೆ ಮಾರ್ಗದರ್ಶನ ಪಡೆಯಲು ಸಹಕಾರಿ. ನಿರಂತರ ಸಂಪರ್ಕ ಸಾಧಿಸಲು ದೂರದರ್ಶನ ನೆರವಾಗಲೆಂದು ನಮ್ಮ ಆಶಯ.

–ಮೈ.ಸತೀಶಕುಮಾರ, ಬಂಗಾರ ಪೇಟೆ

## ಮನಸ್ಸಿಗೆ ಹಿಂಸೆ

ಸೃಜನ್ ಅವರ 'ಮಜಾ ಟಾಕೀಸ್' ಎಲ್ಲರನ್ನೂ ನಗಿಸುವ ಯಶಸ್ವಿ ಕಾರ್ಯಕ್ರಮವಾಗಿ ಮೂಡಿಬರುತ್ತಿದೆ. ಆದರೆ ದಿನಾಂಕ 8ರಂದು ಪ್ರಸಾರವಾದ ಕಾರ್ಯಕ್ರಮ ಮನಸ್ಸಿಗೆ ಹಿಂಸೆಯಾಯಿತು. ನಿಫಾ ವೈರಸ್ ಬಗ್ಗೆ ತಿಳಿಸಿಕೊಡಲು ಮುದ್ದೇಶನನ್ನು ಗುರಿಯಾಗಿಟ್ಟುಕೊಂಡು ಅವರು ಸತ್ತಂತೆ ತೋರಿಸಿ, ಸಾವನ್ನು ವೈಭವೀಕರಿಸಿದ ರೀತಿ ಮನಸ್ಸಿಗೆ ಬಹಳ ನೋವನ್ನುಂಟು ಮಾಡಿತು. ಅಕ್ಕಿ ಕಾಳು, ಹಾಲು ತುಪ್ಪ ಮುಂತಾದ ಸಾವಿನ ನಂತರದ ಕ್ರಿಯೆಯನ್ನು ಆ ಪಾತ್ರಧಾರಿಗೆ ಮಾಡಿದ್ದು ಸರಿಯಲ್ಲ. ಇನ್ನು ಮುಂದೆ ಇಂತಹ ಪ್ರಸಂಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಪ್ರಸಾರ ಮಾಡುವುದು ಒಳಿತು.

–ವಿಶಾಲಾಕ್ಷಿ, ಬೆಂಗಳೂರು

## ಚರ್ವಿತಚರ್ವಣ

ಐದು ನಿಮಿಷ ನಿಧಾನವಾಗಿ ಪ್ರಾರಂಭವಾಗುವುದು, ಮೂರು ನಿಮಿಷಗಳ ನಿರ್ಮಾಣದ ದೃಶ್ಯ, ಎಂಟು ನಿಮಿಷಗಳ ಗಣ್ಯಾತಿಗಣ್ಯರ ದೀರ್ಘ ಕೊರೆತದ ಭಾಷಣ, ಹತ್ತು ನಿಮಿಷ ಪುನರಾವರ್ತನೆಯ ಹಾಡುಗಳು, ನಾಲ್ಕು ನಿಮಿಷ ನಿಗದಿತ ಸಮಯಕ್ಕೆ ಮುಂಚೆಯೇ ಮುಕ್ತಾಯವಾಗುವುದು –ಇದು ರಾತ್ರಿ 10– 10.30ರ ತನಕ ಚಂದನ ವಾಹಿನಿಯಲ್ಲಿ ಪ್ರಸಾರವಾಗುವ 'ಮಧುರ ಮಧುರವೀ ಮಂಜುಳಗಾನ'ದ ಕಾರ್ಯಕ್ರಮ ಪಟ್ಟಿ. ಈ ಕಾರ್ಯಕ್ರಮ ಚರ್ವಿತಚರ್ವಣವಾಗುತ್ತಿದೆ.

–ಶ್ರೀಧರ್, ಬೆಂಗಳೂರು

## ಕಣ್ಣಿಗೆ ಶ್ರಮ

ಚಂದನ ವಾಹಿನಿಯಲ್ಲಿ ಪ್ರಸಾರವಾಗುವ 'ಥಟ್ ಅಂತ ಹೇಳಿ' ಕಾರ್ಯಕ್ರಮದ ಸ್ವರೂಪ ಬದಲಾಗಿದೆ. ಆದರೆ ಕಪ್ಪು–ಬಿಳುಪು ಟಿವಿಯ ವೀಕ್ಷಕರಾದ ನಮಗೆ ಕಾರ್ಯಕ್ರಮದ ಗುಣಮಟ್ಟ ಈ ಮೊದಲೇ ಉತ್ತಮವಾಗಿತ್ತು ಎಂಬ ಅನಿಸಿಕೆ. ಅಲ್ಲದೇ ಪ್ರಶ್ನೆಗಳು ಹಾಗೂ ಆಯ್ಕೆಗಳ ಅಕ್ಷರದ ಗಾತ್ರ ಸಣ್ಣದಾಗಿದ್ದು ಕಣ್ಣಿಗೆ ಶ್ರಮ ನೀಡುತ್ತಿದೆ. ದಯವಿಟ್ಟು ಕಾರ್ಯಕ್ರಮದ ರೂವಾರಿಗಳು ಇದರ ಕುರಿತು ಗಮನ ಹರಿಸಿ.

— ಬಿ.ಸಂ.ಕೃಷ್ಣ, ಕೊಪ್ಪ

## ಸುಖಾಂತ್ಯವಿರಲಿ

'ಗಂಗಾ' ಧಾರಾವಾಹಿಯಲ್ಲಿ ಗಂಗಾಳ ಪಾತ್ರ ತುಂಬಾ ಹಿಡಿಸಿತು. 'ಶನಿ' ಕೂಡಾ ಉತ್ತಮವಾಗಿ ಬರುತ್ತಿದೆ. 'ಬ್ರಹ್ಮಗಂಟು' ಕೂಡಾ ಚೆನ್ನಾಗಿದೆ. 'ಗಂಗಾ' ಧಾರಾವಾಹಿಯನ್ನು ಎಳೆಯುವುದು ಬೇಡ. ಬೇಗ ಅವಳ ಮದುವೆ ಮಾಡಿಸಿ ಸುಖಾಂತ್ಯ ಮಾಡಿ.

–ತೂರಗಲ್ಲ ಸುಶೀಲಾ, ರಾಮದುರ್ಗ